**ಪಾಠ-6** **ಜನವರಿ 30-ಫೆಬ್ರವರಿ 5**

# ಆಡುವ ದೇವರು



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಯೆಶಾಯ 13, ಯೆಶಾಯ 13:2-22, ಯೆಶಾಯ 14, ಯೆಶಾಯ 24-27.

**ಸ್ಮರಣವಾಕ್ಯ : "ಆಹಾ, ಈತನೇ ನಮ್ಮ ದೇವರು, ನಮ್ಮನ್ನು ರಕ್ಷಿಸಲಿ ಎಂದು ಈತನನ್ನು ನಿರೀಕ್ಷಿಸಿಕೊಂಡಿದ್ದೇವೆ; ಈತನೇ ಯಹೋವನು; ಈತನನ್ನು ನಿರೀಕ್ಷಿಸಿಕೊಂಡಿದ್ದೇವೆ; ಈತನ ರಕ್ಷಣೆಯಲ್ಲಿ ಆನಂದಿಸಿ ಉಲ್ಲಾಸ ಪಡುವೆವು"** (ಯೆಶಾಯ 25:9).

ದೇವರ ಸೇವಕನು 'ಗರ್ವ'ದ ಬಗ್ಗೆ ಹೃದಯವನ್ನು ಶೋಧಿಸಿಕೊಳ್ಳುವಂತಹ ಒಂದು ಉಪದೇಶ ಕೊಟ್ಟ ನಂತರ ಆ ಉಪದೇಶವನ್ನು ಕೇಳಿದ ಮಹಿಳೆಯೊಬ್ಬಳು ಸೇವಕನ ಜೊತೆ ಮಾತಾಡುವುದಕ್ಕಾಗಿ ಕಾಯ್ದಳು. ತಾನು ಬಹಳವಾದ ಮನೋವ್ಯಥೆಯಲ್ಲಿರುವುದಾಗಿ ಹೇಳಿದಳು ಮತ್ತು ತನ್ನ ಪಾಪವನ್ನು ಅರಿಕೆ ಮಾಡಿಕೊಳ್ಳಲು ಬಯಸಿದಳು. ಆ ಸೇವಕನು ಆಕೆಯನ್ನು ನೀನು ಅರಿಕೆ ಮಾಡಬೇಕಾಗಿರುವ ಪಾಪ ಯಾವುದು ಎಂದು ಕೇಳಿದನು. ಅದಕ್ಕೆ ಆಕೆಯು ಗರ್ವದ ಪಾಪವೆಂದು ಹೇಳಿದಳು. "ನಾನು ಕೆಲವು ದಿನಗಳ ಹಿಂದೆ ಕನ್ನಡಿಯ ಮುಂದೆ ಕುಳಿತುಕೊಂಡು ಒಂದು ಗಂಟೆಯವರೆಗೆ ನನ್ನ ಸೌಂದರ್ಯವನ್ನು ನಾನು ಸವಿಯುತ್ತಿದ್ದೆನು" ಎಂದು ಹೇಳಿದಳು. ಅದಕ್ಕೆ ಆ ಸೇವಕನು ಅದು

* ಫೆಬ್ರವರಿ ??ನೇ ಸಬ್ಬತ್ತಿನ ಸಿದ್ಧತೆಗಾಗಿ ಈ ವಾರದ ಪಾಠ ಅಧ್ಯಯನ ಮಾಡಿರಿ.

'ಗರ್ವ'ದ ಪಾಪವಲ್ಲ. ಆದರೆ ಕಲ್ಪನೆಯ ಪಾಪವೆಂದು ಹೇಳಿದನು"– ಪಾಲ್ ಲೀ ಟ್ಯಾನ್‌ರವರು ಸಂಪಾದಿಸಿದ 7700 ನಿದರ್ಶನಗಳ ವಿಶ್ವಕೋಶ ಸೈನ್ಸ್ ಆಫ್ ಟೈಮ್ಸ್ ಪುಟ 1100.

ಬಲಾಢ್ಯನಾದ ದೂತನ ಹೃದಯದಲ್ಲಿ ಪಾಪವು ಹುಟ್ಟಿದಾಗಿನಿಂದ 'ಗರ್ವವು' ವಾಸ್ತವತೆಯ ಪರಿಮಿತಿಯನ್ನು ಅರಿತುಕೊಳ್ಳದ ಹಾಗೆ ಮಾಡಿತು ಅಂದರೆ ಸತ್ಯವಾದ ಸಂಗತಿಯ ಮನವರಿಕೆ ಆಗದ ಹಾಗೆ ಮಾಡಿತು (ದೇವದೂತರಲ್ಲಿ ಅಥವಾ ಮನುಷ್ಯರಲ್ಲಿ) ಎಲ್ಲಿ ಆತ್ಮೀಕವಾದ ಗರ್ವವು ಮನೆ ಮಾಡಿರುತ್ತದೋ ಅಲ್ಲಿ ಎಲ್ಲದಕ್ಕಿಂತ ಹೆಚ್ಚಿನ ಸಮಸ್ಯೆಯನ್ನು ಕಾಣಬಹುದು, ಮತ್ತೊಬ್ಬರು ಅವರ ಪರವಾಗಿ ನಿಂತು ಕೆಲಸ ಮಾಡದಿದ್ದರೆ ಅವರ ರಕ್ಷಣೆಯು ಸಾಧ್ಯವಾಗದ ದುಃಸ್ಥಿತಿಗೆ ಅವರು ತಲುಪಿರುತ್ತಾರೆ (ಕೆಟ್ಟುಹೋಗಿರುತ್ತಾರೆ).

ಈ ವಾರದಲ್ಲಿ ಇತರ ವಿಷಯಗಳ ಜೊತೆಗೆ ಗರ್ವದ ಮೂಲ ಮತ್ತು ಅಹಂಭಾವದ ಬಗ್ಗೆ ತಿಳಿದುಕೊಳ್ಳೋಣ.

**ಭಾನುವಾರ** **ಜನವರಿ 31**

## ಜನಾಂಗಗಳ ದುರ್ಗತಿ (ಯೆಶಾಯ 13)

ಯೆಶಾಯ 13:1ರಲ್ಲಿ ಅದನ್ನು ಬರೆದವನ ಹೆಸರು ತಲೆಬರಹವಾಗಿ ಬಂದಿದೆ (ಇದನ್ನು ಯೆಶಾಯ 1:1 ಮತ್ತು 2:1 ರ ಜೊತೆ ಹೋಲಿಸಿರಿ) ಗ್ರಂಥದ ಹೊಸಭಾಗದ ಪ್ರಾರಂಭವನ್ನು ಇದು ಹೇಳುತ್ತದೆ. ಯೆಶಾಯ 13 ರಿಂದ 25 ಅಧ್ಯಾಯಗಳು ದೇವರು ಸಕಲ ಜನಾಂಗಗಳ ವಿರೋಧವಾಗಿ ನೀಡುವ ನ್ಯಾಯತೀರ್ಪನ್ನು ದೈವೋಕ್ತಿಗಳನ್ನು ಜನಾಂಗಗಳ ವಿರುದ್ಧ ಹೇಳಲಾದ ಪ್ರವಾದನೆಗಳು ಬ್ಯಾಬಿಲೋನಿನಿಂದ ಆರಂಭವಾಗುತ್ತವೆ ಏಕೆ?

ಯೆಶಾಯ 10ನೇ ಅಧ್ಯಾಯ 5–34 ವಚನಗಳು ಅಶ್ಶೂರದ ವಿರುದ್ಧವಾಗಿ ದೇವರು ಮಾಡಿರುವ ನ್ಯಾಯತೀರ್ಪನ್ನು ಪ್ರಕಟಿಸುತ್ತದೆ. ಯೆಶಾಯನ ದಿನಗಳಲ್ಲಿ ಅಶ್ಶೂರರಿಗೆ ಸಂಭವಿಸುವ ಅಪಾಯಗಳು ಇಲ್ಲಿ ತಿಳಿಸಲ್ಪಟ್ಟಿವೆ. ಯೆಶಾಯ 14:24–27 ವಚನಗಳು ಅಶ್ಶೂರವನ್ನು ಮುರಿಯುವ ದೇವರ ಯೋಜನೆಯನ್ನು ಸಂಕ್ಷಿಪ್ತವಾಗಿ ತಿರುಗಿ ಹೇಳುತ್ತಿರುವಾಗ ಯೆಶಾಯ 13–23 ಅಧ್ಯಾಯಗಳು

ಇತರ ಅಪಾಯಗಳ ಬಗ್ಗೆ ಅದರಲ್ಲೂ ಬಹಳ ಮುಖ್ಯವಾಗಿ ಬ್ಯಾಬಿಲೋನಿನ ಮೇಲೆ ಬರುವ ಅಪಾಯದ ಬಗ್ಗೆ ಹೇಳುತ್ತವೆ.

ಸಂಪದ್ಭರಿತವಾದ ಪುರಾತನ ಸಾಂಸ್ಕೃತಿಕ, ಧಾರ್ಮಿಕ ಮತ್ತು ರಾಜಕೀಯ ಪರಂಪರೆಯನ್ನು ಹೊಂದಿದ ಬ್ಯಾಬಿಲೋನ್ ಬಳಿಕ ಯಹೂದವನ್ನು ಆಕ್ರಮಿಸಿಕೊಂಡು ಜನರನ್ನು ಗಡಿಪಾರು ಮಾಡುವ ದೊಡ್ಡಶಕ್ತಿಯಾಗಿ ಹೊರಹೊಮ್ಮಿತು. ಆದರೆ ಯೆಶಾಯನ ಕಾಲದಲ್ಲಿ ಬ್ಯಾಬಿಲೋನು ದೇವರ ಪ್ರಜೆಗಳಿಗೆ ಅಪಾಯಕರವಾಗುತ್ತದೆಯೆಂದು ಅವರಿಗೆ ತೋರಲಿಲ್ಲ. ಯೆಶಾಯನ ಸೇವೆಯ ಬಹುತೇಕ ಅವಧಿಯಲ್ಲಿ ಅಶ್ಶೂರವು ಬ್ಯಾಬಿಲೋನಿಗಿಂತ ಬಲಾಢ್ಯವಾಗಿತ್ತು. ಕ್ರಿ.ಪೂ. 720ರಿಂದ ಕ್ರಿ.ಪೂ. 689ರವರೆಗೆ ಅನೇಕ ಸಲ (ಕ್ರಿ.ಪೂ. 710, ಕ್ರಿ.ಪೂ 702, ಕ್ರಿ.ಪೂ. 689) ಅಶ್ಶೂರದ ಅರಸರು ಬ್ಯಾಬಿಲೋನಿನ ಮೇಲೆ ಜಯಸಾಧಿಸಿ ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ. ಮೂರನೇ ತಿಗ್ಲತ್ಪಿಲೆಸರನು ಬ್ಯಾಬಿಲೋನನ್ನು ಗೆದ್ದು ತನ್ನನ್ನು ಅದರ ಅರಸನನ್ನಾಗಿ 'ಪೂಲ' ಎಂಬ ಹೆಸರಿನಿಂದ ಘೋಷಿಸಿಕೊಂಡನು (2 ಅರಸುಗಳು 15:19) ಮತ್ತು 1 ಪೂ. ವೃತ್ತಾಂತ 5:26 ವಚನಗಳನ್ನು ನೋಡಿರಿ).

ಆದಾಗ್ಯೂ ಕಡೆಯಲ್ಲಿ ಬ್ಯಾಬಿಲೋನು ಯಹೂದ ರಾಜ್ಯವನ್ನು ನಾಶಪಡಿಸುವಂತಹ ಪರಮಾಧಿಕಾರಿಯಾಗಿ ಆ ಪ್ರದೇಶದಲ್ಲಿ ಹೊರಹೊಮ್ಮಿತು.

ಯೆಶಾಯ 13ನೇ ಅಧ್ಯಾಯವನ್ನು ಪೂರ್ಣವಾಗಿ ಓದಿದಾಗ ಅದರ ಭಾಷೆಯು ಎಷ್ಟುಕಠಿಣವಾಗಿದೆ ಎಂದು ಗೊತ್ತಾಗುತ್ತದೆ. ಪ್ರೀತಿಸ್ವರೂಪನಾದ ದೇವರು ಇಂಥವುಗಳನ್ನು ಮಾಡುತ್ತಾನೆಯೇ ಅಥವಾ ಇಂಥವುಗಳು ನಡೆಯುವಂತೆ ಬಿಡುತ್ತಾನೆಯೇ? ಖಂಡಿತವಾಗಿ ಕೆಲವರು ಅಮಾಯಕರು (ನಿರಪರಾಧಿಗಳು) ಸಹಾ ಕಷ್ಟ ಅನುಭವಿಸುತ್ತಾರೆ ಅಲ್ಲವೆ? (ಯೆಶಾಯ 13:16). ದೇವರಿಂದ ನಡೆಯುವ ಇಂಥಾ ಕೃತ್ಯಗಳನ್ನು ಹೇಗೆ ಅರ್ಥಮಾಡಿಕೊಳ್ಳುವಿರಿ? ಈ ವಚನಗಳಲ್ಲದೆ ಸತ್ಯವೇದದಲ್ಲಿ ಪಾಪ ಮತ್ತು ದುಷ್ಟತ್ವದ ವಿಷಯದಲ್ಲಿ ದೇವರು ತೋರಿಸುವ ಕೋಪ ಮತ್ತು ರೋಷದ ಬಗ್ಗೆ ಮಾತಾಡುವ ಎಲ್ಲಾ ವಚನಗಳು ಪಾಪ ಮತ್ತು ದುಷ್ಟತ್ವದ ಆಘಾತಕಾರಿ ಸ್ವಭಾವದ ಬಗ್ಗೆ ಏನನ್ನು ತಿಳಿಸಿಕೊಡುತ್ತವೆ?

ಪ್ರೀತಿ ಸ್ವರೂಪಿಯಾದ ದೇವರು ಪಾಪದ ವಿರುದ್ಧ ತೋರಿಸುವ ಕಠಿಣವಾದ ಪ್ರತಿಕ್ರಿಯೆಯು ಪಾಪವು ಎಷ್ಟು ಘೋರವಾದದ್ದು ಎಂಬುದಕ್ಕೆ ಅಗತ್ಯವಾದ ಸಾಕ್ಷಿ ನೀಡುತ್ತದೆ. ಯಾವ ಕ್ರಿಸ್ತನು ಜನರನ್ನು ಕ್ಷಮಿಸಿದನೋ, ಸ್ವಸ್ಥಪಡಿಸಿದನೋ ಪಾಪಿಗಳನ್ನು ಎಚ್ಚರಿಸಿ, ಪಶ್ಚಾತ್ತಾಪ ಪಡುವಂತೆ ಬೇಡಿಕೊಂಡನೋ ಅದೇ ಕ್ರಿಸ್ತನು ಯೆಶಾಯನ ಮೂಲಕ ಈ ಎಚ್ಚರಿಕೆಯ ಮಾತುಗಳನ್ನು ಆಡುತ್ತಿದ್ದಾನೆ ಎಂಬುದನ್ನು ನಾವು ನೆನಪು ಮಾಡಿಕೊಳ್ಳಬೇಕು.

ಪ್ರೀತಿಸ್ವರೂಪಿಯಾದ ದೇವರ ಸ್ವಭಾವದಲ್ಲಿರುವ ಈ ಅಂಶದ ಬಗ್ಗೆ ನಿಮ್ಮ ಸ್ವಂತ ಮನಸ್ಸಿನಲ್ಲಿ ಯಾವ ತೀರ್ಮಾನಕ್ಕೆ ಬರುವಿರಿ? ಇಂಥಾ ರೋಷವು ಹೊರಹೊಮ್ಮುವುದು ನಿಜವಾಗಿಯೂ ಆತನ ಪ್ರೀತಿಯಿಂದಲ್ಲವೇ ಎಂಬ ಪ್ರಶ್ನೆಯನ್ನು ನೀವೇ ಕೇಳಿಕೊಳ್ಳಿರಿ. ಹಾಗಾದರೆ, ಇದು ಹೇಗಾಗುತ್ತದೆ? ಅಥವಾ ಇದನ್ನು ಇನ್ನೊಂದು ದೃಷ್ಟಿಕೋನದಿಂದ ನೋಡೋಣ.

ಇಸ್ರಾಯೇಲ್ಯರ ಪಾಪದಿಂದ ಆ ದೇಶದ ನಿರಪರಾಧಿಗಳು ಪಟ್ಟ ಹಿಂಸೆಗಿಂತಲೂ ಶಿಲುಬೆಯ ಮೇಲೆ ಇಡೀ ಲೋಕದ ಪಾಪವನ್ನು ಹೊತ್ತು ಘೋರ ಹಿಂಸೆಯನ್ನು ಕ್ರಿಸ್ತನು ಅನುಭವಿಸದದು ಈ ಕಠಿಣವಾದ ಪ್ರಶ್ನೆಗಳಿಗೆ ಉತ್ತರ ನೀಡಲು ಹೇಗೆ ಸಹಾಯ ಮಾಡುತ್ತದೆ?

**ಸೋಮವಾರ** **ಫೆಬ್ರವರಿ 1**

## ಹಾಳುಬಿದ್ದ ಮಹಾನಗರ – ಬ್ಯಾಬಿಲೋನ್

ಕ್ರಿ.ಪೂ.626ರಲ್ಲಿ ಕಸ್ದೀಯ ಅರಸನಾದ ನೆಬೋಪೊಲಸ್ಸರನು ಮೇದ್ಯರೊಡನೆ ಸೇರಿ ಅಶ್ಶೂರವನ್ನು ಸೋಲಿಸಿ ಹೊಸ ಬ್ಯಾಬಿಲೋನ್ ಸಂಸ್ಥಾನವನ್ನು ಸ್ಥಾಪಿಸಿ ಅದರ ಹಿಂದಿನ ಮಹಿಮೆಯನ್ನು ಮತ್ತೆ ಅದಕ್ಕೆ ತಂದನು. ಆತನ ಮಗನಾದ ಇಮ್ಮಡಿ ನೆಬೂಕದ್ನೆಚ್ಚರನು ಯಹೂದವನ್ನು ಗೆದ್ದು ಅದರ ಪ್ರಜೆಗಳನ್ನು ಗಡಿಪಾರು ಮಾಡಿದನು.

ಅಂತಿಮವಾಗಿ ಬ್ಯಾಬಿಲೋನ್ ಪಟ್ಟಣವು ಹೇಗೆ ಅವನತಿ ಹೊಂದಿತು? (ದಾನಿಯೇಲ 5ನೇ ಅಧ್ಯಾಯ ನೋಡಿರಿ).

ಕ್ರಿ.ಪೂ. 539ರಲ್ಲಿ ಪಾರಸೀಯ ಅರಸನಾದ ಕೋರೆಷನು ಮೇದ್ಯ ಪಾರಸಿಯ ಸಾಮ್ರಾಜ್ಯಕ್ಕಾಗಿ ಬ್ಯಾಬಿಲೋನನ್ನು ಆಕ್ರಮಿಸಿಕೊಂಡನು ಆವಾಗ ಈ ನಗರವು ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡಿತು. ಕ್ರಿ.ಪೂ. 482ರಲ್ಲಿ ಅರ್ತಶಸ್ತನು ಪಾರಸಿ ಆಳ್ವಿಕೆಯ ವಿರುದ್ಧ ಬ್ಯಾಬಿಲೋನಿನಲ್ಲಿ ಎದ್ದ ದಂಗೆಯನ್ನು ಕ್ರೂರವಾಗಿ ದಮನಮಾಡಿದನು. ಆ ನಗರದ ಪ್ರಮುಖ ದೇವತೆಯಾದ ಮರ್ದಕನ ಪ್ರತಿಮೆಯನ್ನು ತೆಗೆದುಹಾಕಿದನು ಮತ್ತು ಕೆಲವು ಕೋಟೆ ಕೊತ್ತಲುಗಳನ್ನೂ ದೇವಾಲಯಗಳನ್ನೂ ಹಾನಿಗೊಳಿಸಿದನು.

ಗ್ರೀಕ್ ಚಕ್ರವರ್ತಿ ಅಲೆಕ್ಸಾಂಡರನು ಕ್ರಿ.ಪೂ.331ರಲ್ಲಿ ಬ್ಯಾಬಿಲೋನ್ ನಗರವನ್ನು ಪಾರಸಿಯಿಂದ ಯಾವುದೇ ಯುದ್ಧ ಮಾಡದೆ ತನ್ನ ವಶಕ್ಕೆ ತೆಗೆದುಕೊಂಡನು. ಈ ನಗರವನ್ನು ತನ್ನ ಸಾಮ್ರಾಜ್ಯದ ಪೂರ್ವಪ್ರಾಂತ್ಯದ ರಾಜಧಾನಿಯನ್ನಾಗಿ ಮಾಡಬೇಕೆಂದು ಆತನು ಕನಸು ಕಂಡಿದ್ದನು. ಆದರೆ ಅದು ಕೆಲವು ಶತಮಾನಗಳಲ್ಲಿ ಅಳಿದು ಹೋಯಿತು. ಕ್ರಿ.ಶ.198ರಲ್ಲಿ ರೋಮನ್ ಅರಸನಾದ ಸೆಪ್ಟಿಮಸ್ ಸೆವಿರಸ್ಸಾನು ಬ್ಯಾಬಿಲೋನ್ ನಗರ ಸಂಪೂರ್ಣವಾಗಿ ಹಾಳಾಗಿ ಬಿದ್ದಿರುವುದನ್ನು ನೋಡಿದನು. ಹಾಗಾಗಿ ಬ್ಯಾಬಿಲೋನ್ ಮಹಾನಗರವು ಜನವಸತಿಯಿಲ್ಲದ ಕಾರಣ ಅಳಿದುಹೋಯಿತು. ಈ ಪುರಾತನ ನಿವೇಶನದಲ್ಲಿ ಇರಾಕಿನ ಕೆಲವು ಹಳ್ಳಿಯ ಜನರು ವಾಸಿಸುತ್ತಿದ್ದಾರೆ. ಆದರೆ ಅವರು ಆ ನಗರವನ್ನು ತಿರುಗಿ ಕಟ್ಟಲಿಲ್ಲ.

ಯೆಶಾಯ 13ನೇ ಅಧ್ಯಾಯವು ಬ್ಯಾಬಿಲೋನಿನ ದುರ್ಗತಿಯನ್ನು (ನಾಶನ) ವಿವರಿಸುತ್ತದೆ. ಕ್ರಿ.ಪೂ.539ರಲ್ಲಿ ಕೋರಷನು ಬ್ಯಾಬಿಲೋನ್ ಮೇಲೆ ಸಾಧಿಸಿದ ದಿಗ್ವಿಜಯದಲ್ಲಿ ಯಾಕೋಬ್ಯರನ್ನು ಅವರ ದಾಸತ್ವದಿಂದ ಬಿಡುಗಡೆಗೊಳಿಸಿದನು (ಯೆಶಾಯ 14:1–3). ಆತನು ನಗರವನ್ನು ನಾಶಪಡಿಸಲಿಲ್ಲವಾದರೂ ಆ ನಗರದ ಅಂತ್ಯವು ಆರಂಭಗೊಂಡಿತು. ಅದು ಮತ್ತೆ ದೇವರ ಪ್ರಜೆಗಳನ್ನು ಬಾಧಿಸಲಿಲ್ಲ.

ಯೆಶಾಯ 13ನೇ ಅಧ್ಯಾಯವು ಬ್ಯಾಬಿಲೋನಿನ ನಾಶನವನ್ನು ದೇವರು ಮಾಡಿದ ತೀರ್ಪೆಂದು ವಿವರಿಸುತ್ತದೆ. ಆ ನಗರವನ್ನು ಮುತ್ತಿಕೊಂಡ ಸೈನಿಕರು

ದೇವರಿಂದ ಕಳುಹಿಸಲ್ಪಟ್ಟವರು (ಯೆಶಾಯ 13:2–5). ಅದರ ತೀರ್ಪಿನ ಕಾಲವನ್ನು ಯೆಹೋವನ ದಿನವೆಂದು ಹೇಳಲಾಗಿದೆ (ಯೆಶಾಯ 13:6,9) ಮತ್ತು ಯೆಹೋವನ ರೋಷಾಗ್ನಿಯು ಸೂರ್ಯ–ಚಂದ್ರ–ಆಕಾಶ–ಭೂಮಿ ಎಲ್ಲದರ ಮೇಲೂ ಪರಿಣಾಮ ಬೀರುತ್ತದೆ (ಯೆಶಾಯ 13:10,13).

ಯೆಶಾಯ 13ನೇ ಅಧ್ಯಾಯವನ್ನು ನ್ಯಾಯಸ್ಥಾಪಕರು 5ನೇ ಅಧ್ಯಾಯದ ಜೊತೆ ಹೋಲಿಕೆ ಮಾಡಿರಿ. ಇದರಲ್ಲಿ ದೆಬೋರಳು ಮತ್ತು ಬಾರಾಕನು ಹಾಡಿದ ಗೀತೆಯಿದೆ. ಯೆಹೋವನು ಹಾದುಹೋಗುವಾಗ ಭೂಲೋಕವು ಕಂಪಿಸಿತು ಆಕಾಶವು ಹನಿಗರೆಯಿತು ಎಂದು ಹೇಳುತ್ತದೆ (ನ್ಯಾಯ 5:4). ನ್ಯಾಯಸ್ಥಾಪಕರು 5:20,21ನೇ ವಚನಗಳು ನಿಸರ್ಗದ ವಸ್ತುಗಳಾದ ನಕ್ಷತ್ರಗಳು ಸಹಾ ದುರಾಡಳಿತಗಾರರ ವಿರುದ್ಧವಾಗಿ ಹೋರಾಡುವುದನ್ನು ವರ್ಣಿಸುತ್ತವೆ.

ಬ್ಯಾಬಿಲೋನು ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಅದರಲ್ಲಿ ವಾಸಿಸುವ ವ್ಯಕ್ತಿಯೊಬ್ಬನು ಯೆಶಾಯ 13ರಲ್ಲಿರುವ ವಚನಗಳನ್ನು ಅದರಲ್ಲೂ 13:19–22 ವಚನಗಳನ್ನು ಓದುತ್ತಾನೆಂದು ಕಲ್ಪನೆ ಮಾಡಿಕೊಳ್ಳಿರಿ. ಆತನಿಗೆ ಇವು ಹೀಗೆ ಸಂಭವಿಸಲು ಸಾಧ್ಯವೇ ಇಲ್ಲ. ಇದು ಹೀಗೆ ಸಂಭವಿಸುತ್ತದೆ ಎನ್ನುವುದು ಮೂರ್ಖತನವೆಂದು ಆತನು ಅಂದುಕೊಂಡಿರುತ್ತಿದ್ದನು. ಇನ್ನೂ ನೆರವೇರಿಲ್ಲದ ಇತರೆ ಪ್ರವಾದನೆಗಳ ವಿಷಯದಲ್ಲಿ ನಾವು ಸಹಾ ಹೀಗೆ ಆಗಲು ಸಾಧ್ಯವಿಲ್ಲವೆಂದು ನಮಗೂ ಅನಿಸಬಹುದು, ಏನೇ ಆಗಲಿ ಹಾಗೆ ನಡೆಯಲು ಸಾಧ್ಯವಿಲ್ಲವೆಂದು ಪ್ರವಾದನೆಯನ್ನು ಬಿಟ್ಟುಬಿಡುವುದು ಎಷ್ಟು ಮೂರ್ಖತನವಲ್ಲವೆ?

**ಮಂಗಳವಾರ** **ಫೆಬ್ರವರಿ 2**

## ಸುರಗಣ ಪರ್ವತದ ರಾಜನ ಬೀಳುವಿಕೆ (ಪತನ)

ಯೆಶಾಯ 13ರಲ್ಲಿ ಬ್ಯಾಬಿಲೋನಿನ ಪತನ ದೇವಜನರನ್ನು ಬಿಡುಗಡೆಗೊಳಿಸುತ್ತದೆ (ಯೆಶಾಯ 14:1–3) ಇದಕ್ಕೆ ಪ್ರತಿಯಾಗಿ ಯೆಶಾಯ 14:4–23 ಬ್ಯಾಬಿಲೋನಿನ ವಿರುದ್ಧವಾಗಿ ಒಂದು ಅಲಂಕಾರಿಕವಾದ ಮೂದಲಿಕೆಯನ್ನು ನೋಡುತ್ತೇವೆ (ಮೀಕ 2:4, ಹಬಕ್ಕೂಕ 2:6ನ್ನೂ ಸಹಾ ನೋಡಿರಿ). ಇವು ಕಾವ್ಯಾತ್ಮಕವಾದ ವಚನಗಳಾಗಿರುವುದರಿಂದ ಇವುಗಳ ಶಾಬ್ದಿಕ

ಅರ್ಥವನ್ನು ಪರಿಗಣಿಸಬಾರದು ಯಾಕೆಂದರೆ ಮರಣವನ್ನು ಹುಳಗಳೇ ಹಾಸಿಗೆ, ಕ್ರಿಮಿಗಳೇ ಹೊದಿಕೆಯಾಗಿರುವ ಮರಣಲೋಕವೆಂದು ಇಲ್ಲಿರುವ ರಾಜರು ತಮ್ಮನ್ನು ಹೊಸದಾಗಿ ಸೇರಿಕೊಳ್ಳುವ ಸಂಗಡಿಗನನ್ನು ಸ್ವಾಗತಿಸುತ್ತಿರುವುದಾಗಿ ಚಿತ್ರಿಸಿ ಹೇಳುತ್ತಿದೆ. ಯೆಶಾಯ 14:9,10, ಯೆಶಾಯ 14:11). ಇದು ಮರಣ ಹೊಂದಿದವರ ಸ್ಥಿತಿಯ ಬಗ್ಗೆ ಇರುವ ವಿವರಣೆಯಲ್ಲ; ಆದರೆ, ಇತರ ಸಾಮ್ರಾಜ್ಯಶಾಹಿಗಳು (ರಾಜರುಗಳು) ಹೇಗೆ ಗತಿಸಿಹೋದರೋ ಹಾಗೆಯೇ ಒಬ್ಬ ಮಹಾಗರ್ವಿಷ್ಠನೊಬ್ಬನು ಹೀನಸ್ಥಿತಿಗೆ ಬರುವುದನ್ನು ದೇವರು ಸರಳವಾಗಿ ಸಾದೃಶ್ಯ ರೂಪದಲ್ಲಿ ಹೇಳುತ್ತಿದ್ದಾನೆ.

ಯೆಶಾಯ 14:12–14 ವಚನಗಳು ಬ್ಯಾಬಿಲೋನಿನ ರಾಜನಿಗೆ ಅನ್ವಯವಾಗುತ್ತವೆ?

ಬ್ಯಾಬಿಲೋನಿನ ಅಧಿಪತಿಗಳ ಸ್ವಗೌರವಕ್ಕೆ ಯಾವುದೇ ಕೊರತೆಯಿರಲಿಲ್ಲ (ದಾನಿಯೇಲ 4 ಮತ್ತು 5ನೇ ಅಧ್ಯಾಯಗಳು). ಆದರೆ ಉನ್ನತೋನ್ನತನಿಗೆ ಸರಿಸಮಾನನಾಗುವೆನು ಎಂಬ ಆಕಾಂಕ್ಷೆಯು ಮಿತಿಮೀರಿದ ಅಹಂಭಾವವಾಗಿದೆ. ದೇವತೆಗಳ ಜೊತೆಗೆ ತಮಗೆ ಬಲವಾದ ಸಂಬಂಧವಿದೆ ಎಂಬುದಾಗಿ ಹೇಳಿಕೊಂಡಾಗ್ಯೂ ತಾವು ದೇವತೆಗಳಿಗೆ ಅಧೀನರಾಗಿರುವವರು ಎಂದು ಪರಿಗಣಿಸಿಕೊಂಡಿದ್ದರು. ಇದನ್ನು ಅವರು ಪ್ರತಿವರುಷವೂ ಬ್ಯಾಬಿಲೋನ್ ಕಾಲಮಾನದ ಹೊಸವರುಷದ ಐದನೇ ದಿನ ಆಚರಿಸುವ ಉತ್ಸವದಲ್ಲಿ ತಮ್ಮ ರಾಜಲಾಂಛನವನ್ನು ತೆಗೆದುಹಾಕಿ ಮರ್ದಕ್ ದೇವತೆಯ ವಿಗ್ರಹವನ್ನು ಸಮೀಪಿಸಿ ಅದರ ಮುಂದೆ ತಮ್ಮ ರಾಜತ್ವದ ಮರುದೃಢೀಕರಣಕ್ಕಾಗಿ ನಿಲ್ಲುತ್ತಿದ್ದರು. ಯಾವುದೇ ಸಣ್ಣದೇವತೆಗಳ ಸ್ಥಾನವನ್ನು ತೆಗೆದುಹಾಕುವ ಆಲೋಚನೆಯು ಮಾರನಾಂತಿಕವೆಂತಲೂ, ಬುದ್ಧಿಗೇಡಿತನವೆಂತಲೂ ಎಣಿಸಲ್ಪಡುತ್ತಿತ್ತು.

ಯೆಶಾಯ 14ನೇ ಅಧ್ಯಾಯದಲ್ಲಿರುವಂತೆ ಯೆಹೆಜ್ಕೇಲ 28ನೇ ಅಧ್ಯಾಯವು ಪರಲೋಕದ ವಿರುದ್ಧವಾಗಿ ದಂಗೆ ಎದ್ದಗರ್ವಿಷ್ಠನನ್ನು ಭೂಲೋಕದ ಒಂದು ಪಟ್ಟಣವನ್ನಾಳುವ ಅಧಿಪತಿಯ ಜೊತೆ ಗುರುತಿಸುತ್ತದೆ. ಇಲ್ಲಿಯೂ ಸಹಾ ಒಬ್ಬ ಸಾಮಾನ್ಯ ಭೂರಾಜನನ್ನು ಮೀರಿದ ವರ್ಣನೆಯನ್ನು ಕಾಣುತ್ತೇವೆ.

ದೇವರು ತನ್ನ ದೃಷ್ಟಿಯನ್ನು ಇನ್ನೂ ಕಿರಿದಾಗಿಸಿ ಗಮನವನ್ನು ಏದೇನ್ ತೋಟಕ್ಕೆ ಹರಿಸುತ್ತಿದ್ದಾನೆ. ದೇವರ ಪರಿಶುದ್ಧಪರ್ವತದಲ್ಲಿ ಆತನ ಸಮ್ಮುಖದಲ್ಲಿ ನೆರಳು ನೀಡುವ ಕೆರೂಬಿಯಾಗಿ ಸೇವೆ ಸಲ್ಲಿಸುತ್ತಿದ್ದವನು, ಉಂಟಾದಾಗಿನಿಂದ ತನ್ನಲ್ಲಿ ಪಾಪವು ಸಿಗುವ ತನಕ ಪರಿಪೂರ್ಣನಾಗಿದ್ದವನು. ತನ್ನ ಬಂಡಾಯದ ದೆಸೆಯಿಂದ ದೇವರಾದ ಬಹಿಷ್ಕೃತನಾಗಿ ಬೆಂಕಿಯಿಂದ ನಾಶವಾಗತಕ್ಕವನಾದ ಸಮರ್ಥ ಗರ್ವಿಷ್ಠನು ಈವಾಗ ಏದೇನಿನ ತೋಟದಲ್ಲಿದ್ದಾನೆ (ಯೆಹೆ 28:12–18). ಈ ಅತಿಶಯವಾದ ಅರ್ಥಾಲಂಕಾರವುಳ್ಳ ಪದಗಳನ್ನು ಒಬ್ಬ ಮನುಷ್ಯನಿಗೆ ಅನ್ವಯಿಸದರೆ ಅವು ಅರ್ಥರಹಿತವಾಗಿಬಿಡುತ್ತದೆ. ಆದರೆ ಪ್ರಕಟಣೆ 12:7–9 ವಚನಗಳು ಪರಲೋಕದಿಂದ ತನ್ನ ದೂತರ ಸಹಿತವಾಗಿ ದೊಬ್ಬಲ್ಪಟ್ಟವನ ಬಗ್ಗೆ ಹೇಳುತ್ತವೆ, ಈತನೆ ಭೂಲೋಕದವರನ್ನೆಲ್ಲಾ ಮರಳುಗೊಳಿಸುವ ಸೈತಾನನೆಂಬುದಾಗಿ ತಿಳಿಸುತ್ತವೆ (ಪ್ರಕ 12:9). ಈತನು ತಾನೆ ಏದೇನ್ ತೋಟದಲ್ಲಿ ಹವ್ವಳನ್ನು ವಂಚಿದವನಾಗಿದ್ದಾನೆ (ಆದಿಕಾಂಡ 3ನೇ ಅಧ್ಯಾಯ). ನೀನು ಅಹಂಭಾವದ ಕಲ್ಪನೆಯಿಂದ (ಸೈತಾನನು). ನಾನು ದೇವರು, ದೇವರ ಆಸನವನ್ನೇ ಹತ್ತಿದ್ದೇನೆ ಅಂದುಕೊಂಡಿಯಷ್ಟೇ; ನೀನು ನಿನ್ನ ಮನಸ್ಸನ್ನು ದೇವರ ಮನಸ್ಸಿನಷ್ಟು ಹೆಚ್ಚಿಸಿಕೊಂಡದ್ದೇನು? ನೀನು ಎಂದಿಗೂ ದೇವರಲ್ಲ (ಯೆಹೆ 28:2) ಎಂದು ದೇವರು ಆತನಿಗೆ ಹೇಳುತ್ತಾನೆ. ಅವನು ಸಾಯುವ (ನಾಶವಾಗುವ) ರೀತಿಯು ಅವನು ದೇವರಲ್ಲವೆಂಬುದನ್ನು ಸಾಬೀತುಪಡಿಸುತ್ತದೆ. ಸೈತಾನನು ಕ್ರಿಸ್ತನಂತೆ ಎಂದೆಂದಿಗೂ ಜೀವಿಸಲಾರನು. ಆದರೆ ಬೆಂಕಿಯ ಕೆರೆಗೆ ದೊಬ್ಬಲ್ಪಟ್ಟು ಧ್ವಂಸವಾಗುತ್ತಾನೆ. ಮತ್ತೆ ಅವನು ಎಂದೆಂದಿಗೂ ಈ ವಿಶ್ವವನ್ನು ಕಾಡುವುದಿಲ್ಲ (ಪ್ರಕ 20:10).

ಯೆಶಾಯ 14:13,14ನ್ನು ಮತ್ತಾಯ 11:29, ಯೋಹಾನ 13:5 ಮತ್ತು ಫಿಲಿಪ್ಪಿ 2:5–8 ವಾಕ್ಯಗಳೊಂದಿಗೆ ಹೋಲಿಸಿರಿ. ದೇವರ ಈ ಸ್ವಭಾವವು ಸೈತಾನನ ಸ್ವಭಾವಕ್ಕೆ ವ್ಯತಿರಿಕ್ತವಾಗಿದ್ದು ನಮಗೆ ಏನು ಹೇಳುತ್ತದೆ? ಈ ಭಿನ್ನತೆಯು (ವಿರೋಧತೆ) ದೇವರು ಗರ್ವವನ್ನು, ಅಹಂಕಾರವನ್ನು ಮತ್ತು ಸ್ವಶ್ರೇಷ್ಠತೆಯ ಬಯಕೆಯನ್ನು ಯಾವ ರೀತಿ ಪರಿಗಣಿಸುತ್ತಾನೆ ಎಂದು ತಿಳಿಸುತ್ತದೆ?

**ಬುಧವಾರ** **ಫೆಬ್ರವರಿ 3**

## ಪರಲೋಕದ ಬಾಗಿಲು (ಯೆಶಾಯ 13 ಮತ್ತು 14ನೇ ಅಧ್ಯಾಯಗಳು)

ಯೆಶಾಯ 14ನೇ ಅಧ್ಯಾಯದಲ್ಲಿ ಬೆಳ್ಳಿಯೇ, ಉದಯ ನಕ್ಷತ್ರವೇ (ಲೂಸಿಫರ್) (ಯೆಶಾಯ 14:2) ಎಂದು ಕರೆಯಿಸಿಕೊಂಡಿದ್ದ ಸೈತಾನನ ವಿರುದ್ಧ ಮಾಡಿರುವ ಮೂದಲಿಕೆಗೆ ಬಾಬೆಲಿನ ರಾಜನ ವಿರುದ್ಧ ಮಾಡಿರುವ ಮೂದಲಿಕೆಯನ್ನು ಚಿತ್ರಿಸಲಾಗಿದೆ ಏಕೆ?

ಪ್ರಕಟನೆ 12:1–9 ವಚನಗಳು ಘಟಸರ್ಪವನ್ನು ಸೈತಾನನೆಂದು ಗುರುತಿಸುತ್ತವೆ (ಪ್ರಕ 12:9). ಇದು ಸ್ತ್ರೀಯು ಮಗುವನ್ನು ಹೆತ್ತ ಕೂಡಲೇ ನುಂಗಿಬಿಡುವುದಕ್ಕೆ ಕಾದುಕೊಂಡಿತ್ತು ಎಂದು ಹೇಳುತ್ತದೆ. ಪ್ರಕಟನೆ 12:5ನೇ ವಚನದಲ್ಲಿ ಬರುವ ಮಗುವು ನಿಶ್ಚಯವಾಗಿ ಯೇಸುಕ್ರಿಸ್ತನಾಗಿದ್ದಾನೆ. ಆದರೆ ಮಗುವನ್ನು ಕೊಲ್ಲುವುದಕ್ಕೆ ಹವಣಿಸಿದವನು ಉಪರಾಜನಾದ ಹೆರೋದನು (ಮತ್ತಾಯ 2ನೇ ಅಧ್ಯಾಯ). ಹೆರೋದನು ಸೈತಾನನ್ನೂ ರೋಮ್ ಅಧಿಕಾರವನ್ನೂ ಪ್ರತಿನಿಧಿಸುತ್ತಾನೆ. ಯಾಕೆಂದರೆ ಸೈತಾನನು ಮಾನವ ಪ್ರತಿನಿಧಿಗಳ (ಕಾರ್ಯಕರ್ತರ) ಮೂಲಕ ತನ್ನ ಕೆಲಸವನ್ನು ಮಾಡುತ್ತಾನೆ. ಹಾಗೆಯೇ ಬಾಬೆಲಿನ ರಾಜನ ಮತ್ತು ತೂರ್ ಪಟ್ಟಣದ ಪ್ರಭುವಿನ ಹಿಂದೆಯಿದ್ದ ಅಧಿಕಾರವು ಸೈತಾನನೇ ಆಗಿತ್ತು.

ಯಾಕೆ ಬ್ಯಾಬಿಲೋನು ಆ ಮೇಲೆ ರೋಮ್ ಎಂಬುದಾಗಿ (1 ಪೇತ್ರ 5:13) ಮತ್ತು ಪ್ರಕಟನೆಯಲ್ಲಿ ದುಷ್ಟ ಅಧಿಕಾರವನ್ನು ಸೂಚಿಸುವುದಕ್ಕೆ ಉಲ್ಲೇಖಿಸಲ್ಪಟ್ಟಿದೆ? (ಪ್ರಕ 14:8, ಪ್ರಕ 16:19), ಪ್ರಕ 17:5, ಪ್ರಕ 18:2, 10,21).

ನಿಜವಾದ ಬ್ಯಾಬಿಲೋನಿನಂತೆಯೇ ಪ್ರಕಟನೆಯಲ್ಲಿ ಉಲ್ಲೇಖಿತವಾಗಿರುವ ಬ್ಯಾಬಿಲೋನ್ (ಬಾಬೆಲ್) ಮತ್ತು ರೋಮ್ ದೇವರ ಮಕ್ಕಳನ್ನು ಹಿಂಸೆಪಡಿಸುವ ಕ್ರೂರಶಕ್ತಿಗಳಾಗಿವೆ. ಪ್ರಕಟನೆ 17:6ರಲ್ಲಿ ದೇವಜನರ ರಕ್ತವನ್ನು ಕುಡಿದು ಮತ್ತಳಾಗಿದ್ದಳು ಎಂದು ಹೇಳುತ್ತದೆ. ದೇವರ ವಿರುದ್ಧವಾಗಿ ತಿರುಗಿಬಿದ್ದರು ಎಂಬುದನ್ನು ಬ್ಯಾಬಿಲೋನ್ ಎಂಬ ಹೆಸರೆ ಸೂಚಿಸುತ್ತದೆ. ಬ್ಯಾಬಿಲೋನಿನ ಭಾಷೆಯಲ್ಲಿ ಬಾಬ್ ಇಲಿ ಎಂದರೆ ದೇವರ ರಾಜ್ಯಕ್ಕೆ ಕರೆದೊಯ್ಯುವ 'ದೇವರ

ಬಾಗಿಲು' ಎಂದು ಅರ್ಥ ನೀಡುತ್ತದೆ. ಜನರು ದೇವರ ಮಟ್ಟಕ್ಕೆ ಏರಿ ಆತನಿಗೆ ಸರಿಸಮಾನವಾಗಲು ತಾವು ಪಡುವ ಸ್ವಂತ ಪ್ರಯತ್ನವನ್ನು ಬಾಬೆಲ್ ಗೋಪುರವನ್ನು ಕಟ್ಟುವುದರಲ್ಲಿ ನೋಡುತ್ತೇವೆ.

ಯಾಕೋಬನು ತನ್ನ ಮಾವನಾದ ಲಾಬಾನನ ಊರಿಗೆ ಪ್ರಯಾಣ ಮಾಡುತ್ತಾ ರಾತ್ರಿ ವೇಳೆ ಮಲಗಿದ್ದಾಗ ಅವನಿಗೆ ಭೂಮಿಯಿಂದ ಪರಲೋಕವನ್ನು ಮುಟ್ಟುತ್ತಿದ್ದ ಒಂದು ನಿಚ್ಚಣಿಕೆಯನ್ನು ಕನಸಿನಲ್ಲಿ ಕಂಡನು (ಆ.ಕಾಂಡ 28:17) ಎಂದು ಹೇಳಿ ಆ ಸ್ಥಳಕ್ಕೆ 'ಬೆತೆಲ್' ಎಂದು ಹೆಸರಿಟ್ಟನು.

ಬೆತೆಲ್‌ನಲ್ಲಿರುವ ಪರಲೋಕದ ಬಾಗಿಲು ಮತ್ತು ಬ್ಯಾಬಿಲೋನಿನಲ್ಲಿರುವ ದೇವರುಗಳ ಬಾಗಿಲು ಪರಸ್ಪರ ವಿರುದ್ಧವುಳ್ಳ ಮಾರ್ಗಗಳಾಗಿದ್ದವು. ಯಾಕೋಬನು ಕನಸಿನಲ್ಲಿ ಕಂಡ ನಿಚ್ಚಣಿಕೆಯು (ಏಣಿ) ಪರಲೋಕದಿಂದ ಆರಂಭವಾಗಿತ್ತು. ಅದು ಮೇಲಿರುವ ದೇವರಿಂದ ಪ್ರಕಟವಾಗಿತ್ತು, ಆದರೆ ಬ್ಯಾಬಿಲೋನಿನಲ್ಲಿದ್ದ ಗೋಪುರಗಳು ಮತ್ತು ದೇವಾಲಯಗಳು ಭೂಮಿಯ ಮೇಲೆ ಮಾನವರಿಂದ ಕಟ್ಟಲ್ಪಟ್ಟಿದ್ದವು. ಈ ಎರಡು ಪರಸ್ಪರ ವಿರೊಧಗಳು ರಕ್ಷಣೆಯ ಭಿನ್ನಮಾರ್ಗಗಳನ್ನು ಪ್ರತಿನಿಧಿಸುತ್ತವೆ. ದೇವರಿಂದ ಕೊಡಲ್ಪಟ್ಟ ಕೃಪೆ ಮತ್ತು ಅದಕ್ಕೆ ಪ್ರತಿಯಾಗಿ ಮನುಷ್ಯನ ಕೆಲಸಗಳು. ಸತ್ಯವಾಗಿರುವ ಎಲ್ಲಾ ಧರ್ಮಗಳು ದೀನತೆಯುಳ್ಳ ಬೆತೆಲ್ ಮಾದರಿಯ ಮೇಲೆ ನೆಲೆಗೊಂಡಿವೆ. ಯಾಕೆಂದರೆ ಕೃಪೆಯಿಂದಲೆ ನಂಬಿಕೆಯ ಮೂಲಕ ರಕ್ಷಣೆಯುಂಟಾಯ್ತು (ಎಫೆಸ 2:8,9). ಎಲ್ಲಾ ಮಿಥ್ಯ ಧರ್ಮಗಳು, ಕರ್ಮಪ್ರಾಧಾನ್ಯವಾದ ಮತ್ತು ಮಾನವೀಯ ಜಾತ್ಯಾತೀತ ಧರ್ಮಗಳು "ಗರ್ವದ ಬ್ಯಾಬಿಲೋನ್ ಮಾದರಿಯ" ಮೇಲೆ ನೆಲೆಗೊಂಡಿವೆ. ಈ ಎರಡು ವಿಧಾನಗಳು ಎಷ್ಟು ತದ್ವಿರುದ್ಧವಾದವುಗಳು ಎಂಬುದಕ್ಕೆ ಯೇಸುಕ್ರಿಸ್ತನು ಹೇಳಿದ ಫರಿಸಾಯನು ಮತ್ತು ಸುಂಕದವನ ಸಾಮ್ಯವನ್ನು ನೋಡಿರಿ (ಲೂಕ 18:9–14).

ಕೆನಡಾ ದೇಶದ ಗೀತೆ ರಚನೆಕಾರನಾದ ಲಿಯೊನಾರ್ಡ್ ಕೊಡೆನ್ ಕೆಲವು ವರ್ಷಗಳು 'ಝೆನ್' ವಿಹಾರದಲ್ಲಿ ವಾಸಿಸಿದ ಬಳಿಕವೂ ಸಂದರ್ಶನಕಾರನಿಗೆ, "ನಾನು ರಕ್ಷಣೆ ಹೊಂದಿಲ್ಲ" ಎಂದು ಹೇಳಿದನು. ಇವತ್ತಿನ ಪಾಠದ ಅಧ್ಯಯನದ

ಸಂದರ್ಭದಲ್ಲಿ ನೀವು ಆತನ ಸಮಸ್ಯೆಯೇನೆಂದು ಯೋಚಿಸಿರುವಿರಿ? ರಕ್ಷಣೆಯ ವಿಷಯದಲ್ಲಿ ಆತನಿಗೆ ತಿಳಿದಿರಬೇಕಾದದ್ದು ಏನು?

**ಗುರುವಾರ** **ಫೆಬ್ರವರಿ 4**

## ಚೀಯೋನಿನ ಅಂತಿಮ ಜಯ

ಯೆಶಾಯ 13 ರಿಂದ 23ರವರೆಗಿನ ಅಧ್ಯಾಯಗಳು ವೈಯಕ್ತಿಕವಾಗಿ ಒಂದೊಂದು ದೇಶಗಳ ವಿರೋಧವಾಗಿ ದೈವೋಕ್ತಿಗಳನ್ನು ನುಡಿದ ತರುವಾಯ ಯೆಶಾಯ 24 ರಿಂದ 27 ಅಧ್ಯಾಯಗಳು ಪ್ರಪಂಚದ ಮಟ್ಟದಲ್ಲಿ ಅಂತ್ಯಕಾಲದ ಅಂತಿಮ ಘಟನೆಯಾಗಿ ದೇವರ ವೈರಿಗಳು ಸೋತು ಹೋಗಿ ಆತನ ಪ್ರಜೆಗಳು ಬಿಡುಗಡೆ ಹೊಂದುವುದನ್ನು ವಿವರಿಸುತ್ತವೆ.

ಯೆಶಾಯನು 24ನೇ ಅಧ್ಯಾಯದಲ್ಲಿ ವಿವರಿಸಿರುವ ಹಾಳುಬಿದ್ದ ಭೂಮಿಯ ವಿವರಣೆಯು ಯೋಹಾನನು ಕ್ರಿಸ್ತನ ಎರಡನೇ ಬರೋಣವಾದ ತರುವಾಯ ಭೂಮಿಯ ಮೇಲೆ ಇರುವ ಸಾವಿರ ವರುಷಗಳ ಪರಿಸ್ಥಿತಿಯ ವಿವರಣೆಗೆ ಸಂಬಂಧಪಡುವಂತೆ ಕಾಣುತ್ತದೆ ಹೇಗೆ (ಪ್ರಕಟನೆ 20ನೇ ಅಧ್ಯಾಯ).

ಯೆಶಾಯ 13 ಮತ್ತು 14ನೇ ಅಧ್ಯಾಯಗಳಲ್ಲಿ ನಿಜವಾದ ಬ್ಯಾಬಿಲೋನಿನ ಅಂಶಗಳು ನಂತರದ ಅಧಿಕಾರಗಳಿಗೆ ಅನ್ವಯವಾಗುತ್ತವೆ. "ಬ್ಯಾಬಿಲೋನಿನ ರಾಜನು" ಇತರೆ ಅಧಿಕಾರಿಗಳ ಕೂಟವನ್ನು ಪ್ರತಿನಿಧಿಸುತ್ತಾನೆ. ಇದರ ಹಿಂದೆಯಿರುವ "ಪ್ರಮುಖ ದುಷ್ಟಶಕ್ತಿ" ಸತಃ ಸೈತಾನನೇ ಆಗಿದ್ದಾನೆ. ಹಾಗಾಗಿ ಬ್ಯಾಬಿಲೋನು ಬಿತ್ತು ಎಂಬ ಸಂದೇಶವು (ಯೆಶಾಯ 21:9). ನಂತರಕಾಲದಲ್ಲಿ (ಪ್ರಕ 14:8, ಪ್ರಕ 18:2) ಪುನರಾವರ್ತನೆಯಾಗಿ ಬರುತ್ತದೆ. ನಂತರ ಸಾವಿರ ವರ್ಷಗಳು ಕಳೆದ ಮೇಲೆ ಅಂತಿಮವಾಗಿ ಸೈತಾನನು ನಾಶಹೊಂದುತ್ತಾನೆ (ಪ್ರಕ 20:10). ಪುರಾತನ ಬ್ಯಾಬಿಲೋನಿನ ನಾಶವು ದೇವರ ನ್ಯಾಯತೀರ್ಪಿನ ದಿನವಾಗಿದ್ದರೆ (ಯೆಶಾಯ 13:6,9) ಮತ್ತೊಂದು ದೇವರ ಭಯಂಕರವಾದ ದೊಡ್ಡ ದಿನವು ಬರುವುದಕ್ಕಿದೆ (ಯೋವೇಲ 2:31, ಮಲಾಕಿ 4:5ನ್ನು ಚೆಫನ್ಯ 1:7ಕ್ಕೆ ಹೋಲಿಸಿರಿ).

ಇದೇ ರೀತಿಯಲ್ಲಿ ಯೆಶಾಯ 24ನೇ ಅಧ್ಯಾಯವು ಯೆಶಾಯನಿಗೆ

ಪರಿಚಿತವಾದ ಕಾಲದ (ಸನ್ನಿವೇಶದ) ದರ್ಶನವು ಆಗುತ್ತದೆ. ಆ ಕಾಲವು ಯಾವುದೆಂದರೆ "ಆ ದಿನದಲ್ಲಿ... ಚಂದ್ರನು ನಾಚಿಕೆಪಡುವನು, ಸೂರ್ಯನು ಲಜ್ಜೆಗೊಳ್ಳುವನು; ಸೇನಾದೀಶ್ವರನಾದ ಯಹೋವನು ಚೀಯೋನ್ ಪರ್ವತದಲ್ಲಿ ಯೆರೂಸಲೇಮಿನೊಳಗೆ ಆಳುವನಷ್ಟೆ. ಆತನ ಪರಿವಾರದ ಹಿರಿಯರ ಮುಂದೆ ಪ್ರಭಾವವು ಪ್ರತ್ಯಕ್ಷವಾಗುವುದು (ಯೆಶಾಯ 24:23). ಯೆಶಾಯನು ಇದನ್ನು ನಿಸ್ಸಂದೇಹವಾಗಿ ತನಗೆ ಗೊತ್ತಿರುವ ಯೆರೂಸಲೇಮಿಗೆ ಅನ್ವಯಸಿಕೊಳ್ಳುತ್ತಾನೆ. ಆದರೆ ಪ್ರಕಟನೆ ಪುಸ್ತಕವು ಇದು ದಿಟವಾಗಿ ಹೊಸಯೆರೂಸಲೇಮಿನಲ್ಲಿ ನೆರವೇರುತ್ತದೆಯೆಂದು ವಿವರಿಸುತ್ತದೆ (ಪ್ರಕ 21:2). "ಇದಲ್ಲದೆ ಪರಿಶುದ್ಧ ಪಟ್ಟಣವಾದ ಹೊಸಯೆರೂಸಲೇಮು ಪರಲೋಕದಿಂದ ದೇವರ ಬಳಿಯಿಂದ ಇಳಿದು ಬರುವುದನ್ನು ಕಂಡೆನು... ಪಟ್ಟಣಕ್ಕೆ ಬೆಳಕನ್ನು ಕೊಡುವುದಕ್ಕಾಗಿ ಸೂರ್ಯನಾಗಲಿ ಚಂದ್ರನಾಗಲಿ ಬೇಕಾಗಿಲ್ಲ. ಅದಕ್ಕೆ ದೇವರ ಪ್ರಭಾವವೇ ಬೆಳಕನ್ನು ಕೊಟ್ಟಿತು. ಯಜ್ಞನ ಕುರಿಯಾದಾತನೇ ಅದರ ದೀಪವು (ಪ್ರಕ 21:23).

ದೇವರು ನಿಜವಾಗಿಯೂ ದುಷ್ಟರನ್ನು ನಾಶಮಾಡುತ್ತಾನೆಯೆ? ಯೆಶಾಯ 28:21ನೇ ವಚನವು ದೇವರು ನಾಶಪಡಿಸುವ ಕೆಲಸವನ್ನು ಅಪರೂಪದ ಕೆಲಸವೆಂದು, ಅಪೂರ್ವವಾದ ಕಾರ್ಯವೆಂದು ಹೇಳುತ್ತದೆ.

ನಾಶಮಾಡುವುದು ಅವನಿಗಿಷ್ಟವಿಲ್ಲದಿರುವುದರಿಂದ ಅದು ಅವನಿಗೆ ಅಪರೂಪದ ಕೆಲಸವಾಗಿದೆ ಆದಾಗ್ಯೂ ಇದು ಮಾಡಲೇಬೇಕಾದ ಕೃತ್ಯ ಅಥವಾ ಕೆಲಸವಾಗಿದೆ. ಪಾಪವು ತನ್ನೊಂದಿಗೆ ನಾಶದ ಬೀಜವನ್ನು ಕೊಂಡೊಯ್ಯುತ್ತದೆ ಎಂಬುದು ನಿಜವಾದ ಮಾತು (ಯಾಕೋಬ 1:15). ಆದರೆ ದೇವರೆ ಮರಣದ ಮೇಲೆ ಪರಮಾಧಿಕಾರವನ್ನು ಹೊಂದಿರುವುದರಿಂದ ಅಂತಿಮ ನಾಶನದ ಸಮಯ, ಸ್ಥಳ ಮತ್ತು ವಿಧಾನವನ್ನು ಆತನೆ ನಿರ್ಧರಿಸುತ್ತಾನೆ (ಪ್ರಕಟನೆ 20). ಹೀಗಿರುವುದರಿಂದ ದೇವರು ಪಾಪದ ಫಲಿತಾಂಶವನ್ನು ಅಂತಿಮವಾಗಿ ತನ್ನಷ್ಟಕ್ಕೆ ತಾನೆ ನಾಶವಾಗುವ ಅದನ್ನು ಹಾಗೆಯೇ ಬಿಟ್ಟು ಬಿಡುತ್ತಾನೆ ಎಂದು ವಾದ ಮಾಡುವುದರಲ್ಲಿ ಯಾವುದೇ ಹುರುಳಿಲ್ಲವಾದುದಾಗಿದೆ.

ಯೆಶಾಯ 24ರಿಂದ 27ನೇ ಅಧ್ಯಾಯಗಳಲ್ಲಿ ನಾವು ಏನು ನೋಡುತ್ತೇವೆಯೋ ಅದನ್ನು ಸತ್ಯವೇದದಾದ್ಯಂತವು ನೋಡುವವರಾಗಿದ್ದೇವೆ, ಈವಾಗ ಕಷ್ಟಸಂಕಟ ನೋವು ನರಳಾಟ ಹಾಳುಮಾಡುವಂಥದ್ದು ಏನೇ ಇರಲಿ ಅಂತಿಮವಾಗಿ ದೇವರು ಮತ್ತು ಆತನ ಒಳ್ಳೆಯತನವು ಕೆಟ್ಟದ್ದರ ಮೇಲೆ ಗೆಲವು ಹೊಂದುತ್ತದೆ. ನಿಮ್ಮಷ್ಟಕ್ಕೆ ನೀವೇ ಆ ಗೆಲುವಿನ ಭಾಗವಾಗ ಬೇಕಾದರೆ ಮಾಡಬೇಕಾಗಿರುವ ಒಂದೇ ಒಂದು ವಿಷಯ (ಕೆಲಸ) ಯಾವುದು? (ಜ್ಞಾ 3:5–7, ರೋಮ 10:9).

**ಶುಕ್ರವಾರ** **ಫೆಬ್ರವರಿ 5**

**ಹೆಚ್ಚಿನ ಚಿಂತನೆ :** ನಾವು ರಕ್ಷಣೆ ಹೊಂದುವುದಕ್ಕೆ ಷರತ್ತುಗಳು ಇವೆಯೆ? ನಾವು ಕ್ರಿಸ್ತನ ಬಳಿಗೆ ಬರುವುದಕ್ಕೆ ಯಾವ ಷರತ್ತು ಇಲ್ಲ. ಒಂದೊಮ್ಮೆ ನಾವು ಕ್ರಿಸ್ತನ ಬಳಿಗೆ ಬಂದರೆ ನಂತರ ಯಾವ ಷರತ್ತಿಗೆ ಒಳಪಡಬೇಕು? ಹೌದು, ಷರತ್ತಿಗೆ ಒಳಪಡಬೇಕು. ಅದೇನೆಂದರೆ ನಾವು ಸಜೀವ ವಿಶ್ವಾಸದಿಂದ ಕ್ರೂಜೆಗೇರಿಸಲ್ಪಟ್ಟು ಮರಣಹೊಂದಿ ಪುನರುತ್ಥಾನ ಹೊಂದಿದ ಯೇಸುಕ್ರಿಸ್ತನ ರಕ್ತದ ಅರ್ಹತೆಗಳ ಮೇಲೆ ಸಂಪೂರ್ಣವಾಗಿ ಆತುಕೊಳ್ಳಬೇಕು. ನಾವು ಹಾಗೆ ಮಾಡುವುದರಿಂದ ನೀತಿಯ ಫಲವನ್ನು ಹೊಂದಲಿಕ್ಕೆ ಮಾಡಬೇಕಾದ ಕೆಲಸವನ್ನು ಮಾಡುತ್ತೇವೆ (ಮಾಡಿದಂತಾಗುತ್ತದೆ). ಆದರೆ ದೇವರು ಈ ಲೋಕದ ಪಾಪಿಯನ್ನು ಕರೆಯುವಾಗ ಮತ್ತು ಆಹ್ವಾನಿಸುವಾಗ ಯಾವುದೇ ಷರತ್ತನ್ನು ಒಡ್ಡುವುದಿಲ್ಲ. ಬದಲಿಗೆ ಯೇಸುಕ್ರಿಸ್ತನೆಂಬ ಆಮಂತ್ರಣವನ್ನು ಕೊಟ್ಟು ತನ್ನೆಡೆಗೆ ಸೆಳೆಯುತ್ತಾನೆ, ಆದುದರಿಂದ ಈವಾಗ ದೇವರ ಬಳಿಗೆ ಬರುವ ಸಲುವಾಗಿ ನಾವು ಪ್ರತಿಕ್ರಿಯೆ ನೀಡಬೇಕೆಂಬುದಿಲ್ಲ. ಪಾಪಿಯು ಬರುತ್ತಾನೆ, ಬರುತ್ತಿದ್ದ ಹಾಗೆಯೇ ಕಲ್ವಾರಿ ಶಿಲುಬೆಯ ಮೇಲೆ ಏರಿಸಲ್ಪಟ್ಟ ಕ್ರಿಸ್ತನನ್ನು ನೋಡುತ್ತಾನೆ, ಆವಾಗ ತನ್ನ ಕಲ್ಪನೆಗೂ ಮೀರಿದ ಪ್ರೀತಿಯನ್ನು ಕಾಣುವಂತೆ ದೇವರು ಅವನ ಮನಸ್ಸನ್ನು ಪ್ರೇರಿಸುತ್ತಾನೆ" – ಎಲೆನ್ ಜಿ ವೈಟಮ್ಮನವರ ಮ್ಯಾನುಸ್ಕ್ರಿಪ್ಟ್ ರಿಲೀಸಸ್ 6ನೇ ಸಂಪುಟ, 32ನೇ ಪುಟ.

## ಚರ್ಚಿಸಬೇಕಾದ ಪ್ರಶ್ನೆಗಳು

1. ಎಲೆನ್ ಜಿ ವೈಟಮ್ಮನವರ ಮೇಲಿನ ಉಲ್ಲೇಖವನ್ನು ನೋಡಿರಿ: ಬುಧವಾರ ಪಾಠದ ಸಂದರ್ಭಾನುಸಾರ ನಮಗೆ ಏನು ಹೇಳುತ್ತದೆ? ಕ್ರೈಸ್ತ ಜೀವಿತದ ಎರಡೂ ಅಂಶಗಳನ್ನು ಗಮಸಿರಿ; ನಂಬಿಕೆ ಮತ್ತು ಸತ್ಕ್ರಿಯೆ, ಇವುಗಳನ್ನು ವೈಟಮ್ಮನವರು ಹೇಗೆ ಪ್ರತ್ಯೇಕಪಡಿಸಿ ಹೇಳುತ್ತಾರೆ?

2. ಯಾಕೆ ಗರ್ವ ಮತ್ತು ಅಹಂಕಾರ ಅಪಾಯಕರವಾದ ಪಾಪಗಳು? ಅವುಗಳನ್ನು ಬಿಟ್ಟುಬಿಡುವುದು ಬಹಳ ಕಠಿಣ ಏಕೆ? ಅವುಗಳನ್ನು ಬಿಡಬೇಕೆಂಬುದನ್ನು ಕಂಡುಕೊಳ್ಳದ ಹಾಗೆ ಜನರನ್ನು ಕುರುಡು ಮಾಡುವ ಸ್ವಭಾವವು ಅವುಗಳಲ್ಲಿ ಇರುವುದರಿಂದಲೆ? ನೀವು ಗರ್ವಪಡುವ ವ್ಯಕ್ತಿಯಾಗಿದ್ದರೆ ನಾನು ಸರಿಯಾಗಿದ್ದೇನೆ ಎಂದು ಆಲೋಚಿಸುವಿರಿ ನಾನು ಸರಿ ಎಂದು ಆಲೋಚಿಸಿಕೊಂಡಮೇಲೆ ಬದಲಾವಣೆಯ ಬಗ್ಗೆ (ತಿದ್ದಿಕೊಳ್ಳಬೇಕೆಂದು) ಚಿಂತಿಸಲಾರೆವು ಅಲ್ಲವೆ? ಶಿಲುಬೆಯ ಮೇಲೆ ನೆಲೆಗೊಳ್ಳುವುದು ಮತ್ತು ಅದನ್ನು ಪ್ರತಿನಿಧಿಸುವಂಥದ್ದು ಯಾವುದೇ ವ್ಯಕ್ತಿಯ ಗರ್ವ ಮತ್ತು ಅಹಂಕಾರವನ್ನು ಗುಣಪಡಿಸುತ್ತದೆ ಹೇಗೆ?

3. ಯೆಶಾಯನು ಇತರೆ ಜನಾಂಗದವರಿಗಿರುವ ನಿರೀಕ್ಷೆಯನ್ನು ನೋಡುವನೆ? (ಉದಾ: ಯೆಶಾಯ 25:3,6 ಮತ್ತು ಯೆಶಾಯ 26:9ನ್ನು ಪ್ರಕ 19:9ರ ಜೊತೆ ಹೋಲಿಸಿರಿ).

**ಸಾರಾಂಶ:** ಅಶ್ಶೂರ್ಯರದ ನಂತರ ಬ್ಯಾಬಿಲೋನು ಯೆಹೂದವನ್ನು ಗೆದ್ದುಕೊಳ್ಳುತ್ತದೆ ಎಂಬುದನ್ನು ಯೆಶಾಯನು ನೋಡಿದನು. ಆದರೆ, ಆಕಾಶಮಂಡಲದಲ್ಲಿರುವ ಈ ಲೋಕದ ಅಂಧಕಾರ ಶಕ್ತಿಗಳು ದುಷ್ಟಮಾನವರ ಮುಖಾಂತರ ತಮ್ಮ ಕೆಲಸಗಳನ್ನು ನಡಿಸುತ್ತಾ ದೇವರಂತೆ ತಮ್ಮನ್ನು ಭಾವಿಸಿಕೊಂಡಾಗ್ಯೂ ಕರ್ತನು ನಿರ್ಣಾಯಕವಾಗಿ ಅವುಗಳ ಮೇಲೆ ಜಯ ಸಾಧಿಸಿ, ಈ ಭೂಮಿಗೆ ಶಾಶ್ವತವಾದ ಶಾಂತಿ ಸಮಾಧಾನವನ್ನು ತರುತ್ತಾನೆ.